ದೂರಿನನ್ವಯ ತಾಲ್ಲೂಕು ಪಂಚಾಯ್ತಿ ಸಮಿತಿಯಿಂದ ವಿಚಾರಣೆ ನಡೆಸಲಾಗಿದೆಯೇ; ಹಾಗಿದ್ದರೆ ವಿಚಾರಣೆಯ ವಿವರನೀಡುವುದು ?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು):–

ಅ. ಒಟ್ಟು 40 ನಿವೇಶನಗಳನ್ನು ಹಂಚಲಾಗಿದೆ. ವಿವರ ಕೆಳಕಂಡಂತೆ ಇದೆ.

1. ಎ.ಕೆ. 1
2. ಈಡಿಗಾಸ್ 32
3. ಒಕ್ಕಲಿಗ 07

ಆ. ಸರ್ಕಾರಿ ಮಾರ್ಗದರ್ಶನದ ಸುತ್ತೋಲೆ ಸಂ.ಆರ್.ಡಿ.ಪಿ. 67 ಹೆಚ್ಎಲ್ಎ 91 ದಿನಾಂಕ:25–4–91 ಹಾಗೂ 2–11–91 ರ ಪ್ರಕಾರ.

ಇ. ಸದರಿ ವಿಷಯದ ಬಗ್ಗೆ ಯಾವ ತರದ ದೂರಿನ ಅರ್ಜಿಯನ್ನು ತಾಲ್ಲೂಕು ಪಂಚಾಯ್ತಿ ಸಮಿತಿ ಮುಂದಿಡಲಾಗಿರುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೇ, ದಿನಾಂಕ 19-3–1993ರ ಲಿಖಿತ ಮೂಲಕ ಉತ್ತರಿಸುವ 23ನೇ ಪಟ್ಟಿಯಲ್ಲಿರುವ 67 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ 176, 178, 179, 1520, 248, 1532, 1630, 1166, 2029, 1540ಎ ಮತ್ತು 1366, ಈ ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನುಳಿದ 56 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸಂಬಂಧಪಟ್ಟ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಮೈಸೂರು ನಗರದಲ್ಲಿರುವ ಕಾಫಿ ಕ್ಯೂರಿಂಗ್ ವರ್ಕ್ಸ್ ಕೆಲಸದ ಬಗ್ಗೆ

54: ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ):– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮೈಸೂರು ನಗರದಲ್ಲಿರುವ ಕಾಫಿ ಕ್ಯೂರಿಂಗ್ ವರ್ಕ್ಸ್ ಲಾಭದಲ್ಲಿ ನಡೆಯುತ್ತಿದೆಯೇ;

ಆ. ಈ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಸಂಖ್ಯೆ ಎಷ್ಟು ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ. ಮತ್ತು ಆ. ಮೈಸೂರಿನಲ್ಲಿ ಕೆಳಕಂಡ 3 ಕಾಫಿ ಕ್ಯೂರಿಂಗ್ ವರ್ಕ್ಸ್ ಘಟಕಗಳು ಹಾಲಿ ಕೆಲಸ ನಿರ್ವಹಿಸುತ್ತಿವೆ. ಅವುಗಳಲ್ಲಿರುವ ಕೆಲಸಗಾರರ ಸಂಖ್ಯೆ ಹಾಗೂ ಅವುಗಳ ಲಾಭ:ನಷ್ಟಗಳ ಮಾಹಿತಿಯನ್ನು ಪ್ರತಿ ಘಟಕದ ಹೆಸರಿನ ಮುಂದೆ ತೋರಿಸಲಾಗಿದೆ:–

ಘಟಕದ ಹೆಸರು	ಕೆಲಸಗಾರರ ಸಂಖ್ಯೆ		ಘಟಕದ ಲಾಭ:ನಷ್ಟ
	ಸಿಬ್ಬಂದಿ ವರ್ಗ	ಕೆಲಸಗಾರರು	(1991-92ನೇ ಸಾಲಿನದು)
1) ಮೆ:ಮೈಸೂರು ಕಾಫಿ ಪ್ರೋಸೆಸಿಂಗ್ ಕೋ ಆಪರೇಟಿವ್ ಸೊಸೈಟಿ	62	152	ನಷ್ಟ (ರೂ. 36.547–37)